1237 (1582) ಶ್ರೀ ಧರ್ಮೇಗೌಡ ಎಸ್.ಎಲ್ (ಬೀರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು (ಬೀರೂರು ಮತಕ್ಷೇತ್ರ) ತಾಲ್ಲೂಕು ಬೀರೂರು ಹೋಬಳಿ ಎಮ್ಮೆದೊಡ್ಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 1200 ಕ್ಕೂ ಹೆಚ್ಚು ಕುಟುಂಬಗಳು 50 ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ, ಈ ಗ್ರಾಮದಲ್ಲಿ 50 ವರ್ಷಗಳಿಂದ 1 ಎಕರೆಯಿಂದ 3 ಎಕರೆಯವರೆಗೆ ಸಾಗುವಳಿ ಮಾಡುತ್ತಿದ್ದು, ಇದರಲ್ಲಿ ಕೆಲವರಿಗೆ ಮಾತ್ರ ಹಂಗಾಮಿ ಸಾಗುವಳಿ ಪತ್ರ ನೀಡಲಾಗಿದೆಯೇ; ಹಾಗಿದ್ದಲ್ಲಿ, ಇವರೆಲ್ಲರೂ ಬಡ ಕುಟುಂಬಕ್ಕೆ ಸೇರಿದವರಿದ್ದಾರೆಯೇ (ವಿವರ ನೀಡುವುದು);

ಇ) ಸಾಗುವಳಿ ಪತ್ರಕ್ಕಾಗಿ 50 ವರ್ಷಗಳಿಂದ ಹೋರಾಟ ಮಾಡಿಕೊಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು);

ಈ) ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ರಂಗೇನಹಳ್ಳಿ, ಹಸೆಸೆದ್ದರಹಳ್ಳಿ, ಗೋಪಾಲಪುರ, ಲಕ್ಕೇನಹಳ್ಳಿ, ಕೊರಚರಹಟ್ಟಿ, ಮುಸಲಾಪುರದ ಹಟ್ಟಿ, ಹಲಸಿನಮರದಹಳ್ಳಿ, ಸಗನಬಸವನಹಳ್ಳಿ, ಬೋವಿ ಕಾಲೋನಿ ಹಾಗೂ ಕೋಟೆ ಬಳಿಚೇನಹಳ್ಳಿ ಸೇರಿ 10 ಗ್ರಾಮಗಳು ಬರುತ್ತವೆಯೇ;

ಉ) ಈಗಾಗಲೇ ಈ ಗ್ರಾಮಗಳಿಗೆ ಶಾಲಾ ಕಾಲೇಜುಗಳು, ರಸ್ತೆಗಳು, ಆಸ್ಪತ್ರೆ, ವಿದ್ಯಾರ್ಥಿ ನಿಲಯ ಹಾಗೂ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ;(ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ಇಲ್ಲ. ಸದರಿ ಗ್ರಾಮಗಳಲ್ಲಿ 1.00 ರಿಂದ 3.00 ಎಕರೆಯಷ್ಟು ಬಗರ್ ಹುಕುಂ ಸಾಗುವಳಿಯನ್ನು ಮಾಡುತ್ತಾ ಇರುವ ಸಾಗುವಳಿದಾರರೆಲ್ಲರೂ ಬಹುತೇಕ ಬಡ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಸಾಗುವಳಿ ಚೀಟಿಗಾಗಿ 50 ವರ್ಷಗಳಿಂದ ಹೋರಾಟ ಮಾಡಿಕೊಂಡು ಬರುತ್ತಿರುವ ಪ್ರಕರಣಗಳು ಯಾವುದೂ ಇರುವುದಿಲ್ಲ. ಬಗರ್ ಹುಕುಂದಾರರು ಜಮೀನು ಮಂಜೂರಾತಿ ಕೋರಿ ಮನವಿ ಸಲ್ಲಿಸಿರುತ್ತಾರೆ.

ಈ) ಹೌದು.

ಉ) ಈ ಹತ್ತು ಗ್ರಾಮಗಳಿಗೂ ಕಚ್ಚಾ ರಸ್ತೆ ಸೌಲಭ್ಯವಿರುತ್ತದೆ. ಮುಸಲಾಪುರದ ಹಟ್ಟಿಯಲ್ಲಿ ಸರ್ಕಾರಿ ಆಸ್ಪತ್ರೆ ಹೊಸದಾಗಿ ನಿರ್ಮಾಣ ವಾಗಿದ್ದು, ಇನ್ನೂ ಪ್ರಾರಂಭವಾಗುವುದಿಲ್ಲ. ಸದರಿ ಗ್ರಾಮಗಳ ಗ್ರಾಮಸ್ಥರು 25 ಕಿ.ಮೀ. ದೂರದಿಂದ ಕಡೂರು ಪಟ್ಟಣಕ್ಕೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಮತ್ತು ಮಕ್ಕಳುಗಳು ವಿದ್ಯಾಭ್ಯಾಸಕ್ಕಾಗಿ ಶಾಲೆ ಮತ್ತು ಕಾಲೇಜುಗಳಿಗೆ ಬರಬೇಕಾಗಿರುತ್ತದೆ.

1239 (1426) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) : ಮಾನ್ಯ ಯೋಜನೆ ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಜ್ಞಾನಿಗಳಲ್ಲಿ ತಾಂತ್ರಿಕ ವರ್ಗದ ಸಿಬ್ಬಂದಿಯ ತಾಂತ್ರಿಕ ವರ್ಗದ ಸಿಬ್ಬಂದಿಯ ಸಂಖ್ಯೆ ಎಷ್ಟು;

ಆ) ಇದರಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ಯೋಗಿಗಳ ಸಂಖ್ಯೆ ಎಷ್ಟು (ವೃಂದವಾರು ವಿವರ ಒದಗಿಸುವುದು);

ಇ) ಈ ಸಂಸ್ಥೆಯಲ್ಲಿ ಬ್ಯಾಕ್‌ಲಾಗ್ ನೇಮಕಾತಿಗಾಗಿ ಕೈಗೊಂಡ ಕ್ರಮಗಳೇನು?

ಶ್ರೀ ರಾಮಚಂದ್ರಗೌಡ (ಯೋಜನೆ ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) **1) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ:**

ಒಂದು ಹುದ್ದೆ–ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವಾಲಯದ ನಿರ್ದೇಶಕರು (ತಾಂತ್ರಿಕ) ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

2) ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ:

ಈ ಅಕಾಡೆಮಿಯು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಒಂದು ಸಲಹಾ ಸಂಸ್ಥೆಯಾಗಿದ್ದು, ಯಾವುದೇ ಖಾಯಂ ಹುದ್ದೆಯನ್ನು ಸೃಜಿಸಲು ಅನುಮತಿ ನೀಡಿಲ್ಲ. ಅಕಾಡೆಮಿಯ ಮುಖ್ಯ